ರಾಜ ಕಾಲುವೆಗಳು

36 (253) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ):– (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹಲವಾರು ರಾಜಕಾಲುವೆಗಳನ್ನು ಒತ್ತುವರಿ ಮಾಡಿರುವುದರಿಂದ ಹಾಗೂ ಹೂಳು ತುಂಬಿ ನೀರು ಕೆರೆಗಳಿಗೆ ಹೋಗುವ ಸಂಪರ್ಕ ಕಳೆದು ಕೊಂಡಿರುವುದರಿಂದ ಕೆರೆಗಳಿಗೆ ನೀರು ಬರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ದೊಡ್ಡಬಳ್ಳಾಪುರ ತಾಲ್ಲೂಕಿನ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಬಂದಿದೆ

ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ 39 ಕೆರೆಗಳಿದ್ದು, ಪ್ರಸಕ್ತ ಸಾಲಿನಲ್ಲಿ 9 ಕೆರೆಗಳನ್ನು ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗಿದೆ.

ಹನೂರು ಜಲಾಶಯದಲ್ಲಿ ಕಾಮಗಾರಿ

37 (71) ಶ್ರೀ ನರೇಂದ್ರ ಆರ್. (ಹನೂರು):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹನೂರು ಬಳಿಯಿರುವ ಗುಂಡ್ಯಾಲ್ ಡ್ಯಾಮ್ ನೀರು ಹರಿಯುವ ಮುಖ್ಯ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವುದು ಹಾಗೂ ಮುಳ್ಳಿ ತೂಬು ಮತ್ತು ಗೇಟುಗಳ ದುರಸ್ತಿ ಕಾರ್ಯ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇವುಗಳನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಆ) ಹನೂರು ಮತಕ್ಷೇತ್ರದ ಅಜ್ಜೀಪುರ ಬಳಿಯಿರುವ ಉಡುತೊರೆ ಜಲಾಶಯದ ಕಾಮಗಾರಿ ಮುಗಿದಿದ್ದು, ಅದರ ಮುಖ್ಯ ಕಾಲುವೆ ಹಾಗು ತೋಳು ಕಾಲುವೆಗಳು ಹಾಗೂ ಅದಕ್ಕೆ ಅಳವಡಿಸಿರುವ ಗೇಟುಗಳು ಇನ್ನೂ ನಿರ್ಮಾಣ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಆ ಕೆಲಸವನ್ನು ಎಂದು ಕೈಗೆತ್ತಿಕೊಳ್ಳಲಾಗುವುದು;

ಇ) ಹನೂರಿನಲ್ಲಿ ನಿರ್ಮಾಣ ಆಗುತ್ತಿರುವ ಹುಬ್ಬೇಹುಣಸೆ ಜಲಾಶಯದ ನಿರ್ಮಾಣದ ಕೆಲಸ ಸುಮಾರು ಎರಡು ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅದಕ್ಕೆ ಇರುವ ಅಡತಡೆಗಳನ್ನು ಸರಿಪಡಿಸಿ ನಿರ್ಮಾಣ ಕಾರ್ಯಗಳನ್ನು ಎಂದು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಗುಂಡಾಲ್ ಬಲದಂಡೆ ನಾಲೆ ಹಾಗೂ ಎಡದಂಡೆ ನಾಲೆಗಳಲ್ಲಿ ಹೂಳು ತುಂಬಿದ್ದ ಮತ್ತು ಈ ಮುಖ್ಯ ನಾಲೆಗಳ ಗೇಟುಗಳು ದುರಸ್ಥಿಗೆ ಬಂದಿದ್ದ ವಿಷಯ ಸರ್ಕಾರದ ಗಮನಕ್ಕೆ ಬಂದಿದ್ದು, ಎಡದಂಡೆ ಮತ್ತು ಬಲದಂಡೆ ನಾಲೆಯ ಬಿಡುಗುಂಡಿ ಬಳಿಯ ಗೇಟುಗಳನ್ನು ಮತ್ತು ಎಡದಂಡೆ ನಾಲೆಯ 3 ಮತ್ತು 7ನೇ ತೂಬುಗಳ ಗೇಟುಗಳ ದುರಸ್ಥಿ ಕಾರ್ಯವನ್ನು 2009–10ನೇ ಸಾಲಿನಲ್ಲಿ ರೂ. 1.92 ಲಕ್ಷ ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.

ಬಲದಂಡೆ ನಾಲೆ ಹಾಗೂ ಎಡದಂಡೆ ನಾಲೆಗಳು ತಲಾ 16.20 ಕಿ.ಮೀ. ಉದ್ದ ಇವೆ. ಈ ನಾಲೆಗಳಲ್ಲಿ ನೀರು ಸರಾಗವಾಗಿ ಹರಿಯಲು ಅನುವಾಗುವಂತೆ 2010–11ನೇ ಸಾಲಿನಲ್ಲಿ ರೂ. 14.04 ಲಕ್ಷ ಮತ್ತು 2011–12ನೇ ಸಾಲಿನಲ್ಲಿ ರೂ. 15.51 ಲಕ್ಷಗಳ ವೆಚ್ಚದಲ್ಲಿ ಹೂಳು ಮತ್ತು ಜಂಗಲ್ ಗಳನ್ನು ತೆಗೆಯಲಾಗಿದೆ. ಅಲ್ಲದೆ, 2011–12ನೇ ಸಾಲಿನಲ್ಲಿ ಬಲದಂಡೆ ನಾಲೆಯ 0.00 ಯಿಂದ 4.00 ನೇ ಕಿ.ಮೀ. ವರೆಗೆ ಮತ್ತು ಎಡದಂಡೆ ನಾಲೆಯ 11 ರಿಂದ 16ನೇ ಕಿ.ಮೀ. ವರೆಗೆ ಅಭಿವೃದ್ಧಿ ಕಾಮಗಾರಿಗಳನ್ನು ರೂ. 8.50 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಗುಂಡಾಲ್ ಬಲದಂಡೆ ನಾಲೆಯ ಅಡಿಯಲ್ಲಿ ಒಟ್ಟು 17 ತೂಬುಗಳು ಇವೆ. ಅವುಗಳಲ್ಲಿ 0,00 ರಿಂದ 6.80 ಕಿ.ಮೀ. ವರೆಗೆ ಬರುವ 7 ತೂಬುಗಳು ಗೇಟುಗಳನ್ನು 2010–11ನೇ ಸಾಲಿನಲ್ಲಿ ದುರಸ್ಥಿಗೊಳಿಸಿದ್ದು, ಒಟ್ಟಾರೆ ಈ ರೀಚ್ ನಲ್ಲಿರುವ 8 ತೂಬಿನ ಗೇಟುಗಳು ಸುಸ್ಥಿತಿಯಲ್ಲಿವೆ.\

ಎಡದಂಡೆ ನಾಲೆಯ ಅಡಿಯಲ್ಲಿ 16 ತೂಬುಗಳು ಇವೆ, ಅವುಗಳಲ್ಲಿ 0.00 ರಿಂದ 4.20 ಕಿ.ಮೀ. ವರೆಗೆ ಬರುವ ಒಟ್ಟು 7 ಗೇಟುಗಳ ಪೈಕಿ 2 ತೂಬುಗಳ ಗೇಟುಗಳನ್ನು 2009–10ರಲ್ಲಿ ಮತ್ತು 5 ಗೇಟುಗಳನ್ನು 2010–11ನೇ ಸಾಲಿನಲ್ಲಿ ದುರಸ್ಥಿಗೊಳಿಸಿದ್ದು,

ಈ 7 ತೂಬುಗಳ ಗೇಟುಗಳು ಸುಸ್ಥಿತಿಯಲ್ಲಿವೆ.

ಬಲದಂಡೆ ನಾಲೆಯ ತೂಬಿನ ಸಂಖ್ಯೆ 9 ರಿಂದ 17 ರವರೆಗಿನ ಗೇಟುಗಳನ್ನು ಮತ್ತು ಎಡದಂಡೆ ನಾಲೆಯ ತೂಬಿನ ಸಂಖ್ಯೆ: 8 ರಿಂದ 16ನೇ ತೂಬು ದುರಸ್ಥಿಗೊಳಿಸಬೇಕಾಗಿದ್ದು, ದುರಸ್ಥಿ, ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಆ) ಉಡುತೊರೆಹಳ್ಳ ಜಲಾಶಯದ ಕಾಮಗಾರಿಯು ಪೂರ್ಣಗೊಂಡಿದೆ. ಅಲ್ಲದೆ, ಈ ಯೋಜನೆಯ ಮುಖ್ಯ ಕಾಲುವೆಗಳು, ವಿತರಣಾ ನಾಲಾ ಕಾಮಗಾರಿಗಳು ಸಹಾ ಪೂರ್ಣಗೊಂಡಿದ್ದು, ಗೇಟುಗಳನ್ನು ಅಳವಡಿಸಲಾಗಿದೆ. ಉಡುತೊರೆಹಳ್ಳ ಯೋಜನೆಯ ಒಟ್ಟು ನೀರಾವರಿ ಕ್ಷೇತ್ರ 6,213 ಹೆಕ್ಟೇರ್ ಆಗಿದ್ದು, ಈ ಪೈಕಿ 1,649 ಹೆಕ್ಟೇರ್ ಪ್ರದೇಶಕ್ಕೆ ತೋಳು ಕಾಲುವೆಗಳನ್ನು ನಿರ್ಮಿಸುವುದು ಬಾಕಿ ಇದ್ದು, 2011–12ನೇ ಸಾಲಿನಲ್ಲಿ ರೂ. 124.63 ಲಕ್ಷ ಅನುದಾನವನ್ನು ಕಾವೇರಿ ನೀರಾವರಿ ನಿಗಮದಿಂದ ಒದಗಿಸಲಾಗಿರುತ್ತದೆ. ಈವರೆಗೆ 452 ಹೆಕ್ಟೇರ್ ಪ್ರದೇಶಕ್ಕೆ ತೋಳುಗಾಲುವೆ ನಿರ್ಮಿಲಾಗಿದೆ. ಉಳಿಕೆ ಪ್ರದೇಶದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಹನೂರು ಹೋಬಳಿಯ ಉದ್ದನೂರು ಗ್ರಾಮದ ಬಳಿಯಲ್ಲಿ ಕೈಗೊಂಡಿರುವ ಹುಬ್ಬೆಹುಣಸೆ ಕೆರೆ ನಿರ್ಮಾಣದ ಕಾಮಗಾರಿ ಸುಮಾರು ಎರಡು ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2007–08ನೇ ಸಾಲಿನಲ್ಲಿ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದ, ಈ ಕಾಮಗಾರಿಯನ್ನು ಗುತ್ತಿಗೆದಾರರು ಪೂರ್ಣಗೊಳಿಸದ ಕಾರಣ ನಿಯಮಾನುಸಾರ ಗುತ್ತಿಗೆಯನ್ನು ಗುತ್ತಿಗೆದಾರರ ಹೊಣೆ ಮತ್ತು ಜವಾಬ್ದಾರಿಯ ಮೇರೆಗೆ ದಿನಾಂಕ 11–02–2011ರಂದು ರದ್ದುಗೊಳಿಸಿ, ಉಳಿಕೆ ಕಾಮಗಾರಿಗೆ ದಿನಾಂಕ 17–03–2011 ರಂದು ಹೊಸದಾಗಿ ಟೆಂಡರ್ ಆಹ್ವಾನಿಸಲಾಗಿತ್ತು.

ಹೊಸ ಟೆಂಡರ್‌ಗೆ ಅನುಮೋದನಾ ಪ್ರಕ್ರಿಯೆ ಚಾಲನೆಯಲ್ಲಿದ್ದಾಗ ಹಿಂದಿನ ಗುತ್ತಿಗೆದಾರರು ತಮ್ಮ ಗುತ್ತಿಗೆ ರದ್ದತಿಯನ್ನು ಮತ್ತು ಹೊಸ ಟೆಂಡ್ ಪ್ರಕ್ರಿಯೆಯನ್ನು ಪ್ರಶ್ನಿಸಿ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಗೆ ನ್ಯಾಯಾಲಯವು ಕಾವೇರಿ ನಿರಾವರಿ ನಿಗಮದ ಪರವಾಗಿ ತೀರ್ಪು ನೀಡಿತ್ತು. ಈ ಆದೇಶವನ್ನು ಪ್ರಶ್ನಿಸಿ ಸದರಿ ಗುತ್ತಿಗೆದಾರರು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯ ವಿಚಾರಣೆಗೆ ಪರಿಗಣಿಸಿದ್ದು, ಹೊಸ ಟೆಂಡರ್ ಪ್ರಕ್ರಿಯೆಗೆ

ದಿನಾಂಕ 09–09–2011 ರಂದು ತಡೆಯಾಜ್ಞೆ ನೀಡಿದೆ. ತಡೆಯಾಜ್ಞೆ ತೆರವಿಗೆ ಕ್ರಮ ವಹಿಸಲಾಗಿದೆ. ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಗೊಂಡ ನಂತರ ಉಳಿಕೆ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕೋಡಿಯ ಹೆಚ್ಚುವರಿ ನೀರು

40 (258) ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೇಲುಕೋಟೆ ಕ್ಷೇತ್ರದ, ಮಂಡ್ಯ ತಾಲ್ಲೂಕು, ದುದ್ದ ಹೋಬಳಿ ವ್ಯಾಪ್ತಿಯಲ್ಲಿ ಬರುವ ಜಿ. ಮಲ್ಲಿಗೆರೆ ಕೆರೆ ಕೋಡಿಯಿಂದ ಹರಿಯುವ ಹೆಚ್ಚುವರಿ ನೀರಿಗಾಗಿ ಮಾಡಿರುವ ಕಾಲುವೆಯು ಎಂದು ಮಂಜೂರಾಗಿರುವುದು;

ಆ) ಹಾಗಿದ್ದಲ್ಲಿ, ಈ ಕಾಲುವೆಯಲ್ಲಿ ನೀರನ್ನು ಹರಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು? (ಮಾಹಿತಿ ನೀಡುವುದು)

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಜಿ. ಮಲ್ಲಿಗೆರೆ ಕೆರೆ ಕೋಡಿಯಿಂದ ಹರಿಯುವ ಹೆಚ್ಚುವರಿ ನೀರನ್ನು ಕಾಳೇನಹಳ್ಳಿ ವಿತರಣಾ ನಾಲೆಯಡಿ ಸುಮಾರು 1200 ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ಒದಗಿಸಲು ಜಿ. ಮಲ್ಲಿಗೆರೆ ಕೆರೆ ಕೋಡಿಯಿಂದ ಕಾಳೇನಹಳ್ಳಿ ವಿತರಣಾ ನಾಲೆಯ 4ನೇ ಕಿ.ಮಿ.ಗೆ ಸೇರಿಸುವ ಸಂಪರ್ಕ ನಾಲಾ ಯೋಜನೆಯ ಅಂದಾಜು ಮೊತ್ತ ರೂ. 92.00 ಲಕ್ಷಗಳಿಗೆ ಸರ್ಕಾರ ಪತ್ರ ಸಂಖ್ಯೆ: ಜಸಂಇ 331 ಎನ್‌ಹೆಚ್‌ಪಿ 2001 ದಿನಾಂಕ 03–10–2001 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಅಂದಾಜಿಗೆ ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಗೊರೂರು ರವರು ದಿನಾಂಕ 17–05–2003 ರಲ್ಲಿ ರೂ. 105.00 ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಲುವೆಯಲ್ಲಿ ನೀರನ್ನು ಕಳೆದ ಸಾಲಿನಲ್ಲಿ ಪ್ರಾಯೋಗಿಕವಾಗಿ ಹರಿಸಿದಾಗ, ಮೊದಲನೇ ಕಿ.ಮೀ.ನಲ್ಲಿ ನಾಲಾ ತಳಮಟ್ಟವು ಪೂರ್ಣಮಟ್ಟ ತಲುಪದೇ ಇರುವುದಿಂದ ಹಾಗೂ ಅಲ್ಲಲ್ಲಿ ಮಣ್ಣು ಕುಸಿದು ಬಿದ್ದಿರುವುದರಿಂದ ನಾಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ನೀರನ್ನು ಹರಿಸಲು ಸಾಧ್ಯವಾಗಿರುವುದಿಲ್ಲ.

ಅಲ್ಲದೇ, ಸದರಿ ನಾಲಾ ಸರ:375 ಮೀ.ನಲ್ಲಿ ಇರುವ ಸಿ.ಡಿ. ಕಾಮಗಾರಿಯೂ ಸಹ